ಓ.ಎಸ್.183/2021 ಡಿ.ಡಬ್ಲು-2
*ಬಸಲಿಂಗಪ್ಪ ತಂದೆ ಹನುಮಂತಪ್ಪ*

ದಿನಾಂಕ 27-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಎ.ಎ.ಜಿ ವಕೀಲರಿಂದ** :-

ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ಹೊಲಗಳ ಖರೀದಿ ವ್ಯವಹಾರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಾನು ಖರೀದಿ ಪತ್ರಕ್ಕೆ ಸಹಿ ಮಾಡುವಾಗ ಓದಿ ತಿಳಿದು ಸಹಿ ಮಾಡುತ್ತೇನೆ ಎಂದರೆ ಸರಿ. ಈ ಕೇಸನ್ನು ನಮ್ಮ ಸೊಸೆ ಮಲ್ಲಮ್ಮಳು ತನ್ನ ಗಂಡನ ವಿರುದ್ಧ ಹಾಕಿರುತ್ತಾಳೆ. ತನ್ನ ಮತ್ತು ಗಂಡನ ನಡುವೆ ವೈಮನಸ್ಸು ಬಂದಿದ್ದರಿಂದ ಈ ಕೇಸು ಹಾಕಿರುತ್ತಾಳೆ. ನಮಗೆ ಸಾಕ್ಷಿ ಹೇಳಲು ಮಲ್ಲಮ್ಮ ಕರೆದಿರುತ್ತಾಳೆ. ಮಲ್ಲಮ್ಮ ಈ ದಾವೆಯಲ್ಲಿ ವಾದಿ ಅಥವಾ ಪ್ರತಿವಾದಿ ಇದ್ದಾಳೋ ಎಂದು ನನಗೆ ಗೊತ್ತಿಲ್ಲ. ಓ.ಎಸ್.ನಂ.40/1998 ರ ದಾವೆ ಬಗ್ಗೆ ಮಾಹಿತಿ ಇಲ್ಲ. ಅಂತಿಮ ಡಿಕ್ರಿ ಪ್ರಕ್ರಿಯೇ ಬಗ್ಗೆ ಮಾಹಿತಿ ಗೊತ್ತಿಲ್ಲ. ಅಂತಿಮ ಡಿಕ್ರಿ 13/2025 ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದ ಗಂಡನ ವಿರುದ್ಧ ಹಾಕಿದ್ದಾಳೆ ಎನ್ನುವ ವಿಷಯ ಮಾತ್ರ ಗೊತ್ತು. ಪ್ರತಿವಾದಿ 1 ರಿಂದ 6 ಯಾರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ನಿ.ಪಿ-1 ಖರೀದಿ ಪತ್ರವನ್ನು ತೋರಿಸಲಾಗಿ ಅದರಲ್ಲಿ 4 ನೇ ಸಾಕ್ಷಿದಾರರ ಸಹಿ ತನ್ನದು ಎಂದು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಖರೀದಿ ಪತ್ರದ ಪ್ರಕಾರ ವಾದಿಯು ಹನುಮಪ್ಪನಿಂದ ಜಮೀನು ಖರೀದಿ ಮಾಡಿದ್ದು ನಾನು ಸಾಕ್ಷಿಯಾಗಿ ನೊಂದಣಿ ಕಚೇರಿಗೆ ಹೋಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಆಗ ಖರೀದಿ ಪತ್ರಕ್ಕೆ ವ್ಯವಹಾರ ಸರಿಯಾಗಿದ್ದು ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಇದೇ ರೀತಿ ಬರೆಯಿರಿ ಎಂದು ನಾನು ಹೇಳಿ ಬರೆಸಿರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.